ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ**11.08.2022**

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ ಎಸ್ ಆರ್ ವಕೀಲರಿಂದ

ನನ್ನ ಗಂಡ ದಿನೇಶ್ ಕುಮಾರ್ ಅಲಿಯಾಸ್ ದಿನೇಸ್ ಕೆ ಮತ್ತು ನನ್ನ ತಂಗಿ ಕಾವ್ಯ ವಿ ಜೆ ರವರಿಗೆ ಹುಟ್ಟಿರುವ ಗಂಡು ಮಗು ಹಿತೇಶ್ ಗೌಡ ರವರ ಜನನ ಪ್ರಮಾಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನನ್ನ ಗಂಡನ ಮೇಲೆ ನಾನು ಹೂಡಿರುವ ಸಿ ಆರ್ ಎಂ ಸಿ ನಂಃ 24/2019 ರ ಆದೇಶ ಪುಟ ಮತ್ತು ಅರ್ಜಿವನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ-2 ಮತ್ತು 3 ಎಂದು ಗುರುತಿಸಲಾಯಿತು.

ನನ್ನನ್ನು ನಮ್ಮ ಮನೆಯಿಂದ ನನ್ನ ವಸ್ತುಗಳನ್ನು ಕೊಡದೆ ಹೊರಗೆ ಓಡಿಸಿರುವುದರಿಂದ ನನ್ನ ಹತ್ತಿರ ನಮ್ಮ ಮದುವೆಯ ಫೋಟೋಗಳು ಇರುವುದಿಲ್ಲ. ನನಗೆ ಪೊಲೀಸರವರ ಬೆಂಗಾವಲನ್ನು ಕೊಟ್ಟರೆ ನಾನು ನಮ್ಮ ಮನೆಗೆ ಹೋಗಿ ಆ ಫೋಟೊಗಳನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನ್ನ ಮಗಳ ಜನನ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ ನಿಪಿ-4 ಎಂದು ಗುರುತಿಸಲಾಯಿತು. ನನ್ನ ಮಗಳು ಫಾತಿಮಾ ಶಾಲೆಯಲ್ಲಿ ಓದುತ್ತಿದ್ದು, ನನ್ನ ಮಗಳ ಸ್ಟಡಿ ಸರ್ಟಿಫಿಕೇಟ್ ನ್ನು ಹಾಜರುಪಡಿಸಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ನನ್ನ ಆಧಾರ್ ಕಾರ್ಡ್ ನ್ನು ಹಾಜರುಪಡಿಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ನನ್ನ ಮಗಳ ಆಧಾರ್ ಕಾರ್ಡ್ ನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-7 ಎಂದು, ಪಡಿತರ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂದು, ನನ್ನ ಚುನಾವಣಾ ಗುರುತಿನ ಚೀಟಿಯನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ನಾನು ಪೊಲೀಸ್ ಠಾಣೆಯಲ್ಲಿ ನನ್ನ ಗಂಡ ಮತ್ತು ಇತರೆ ಆರೋಪಿಗಳ ವಿರುದ್ಧ ದಿಃ 9.1.2012 ರಂದು ದೂರನ್ನು ನೀಡಿದ್ದು, ಪೊಲೀಸರು ಅದನ್ನು ಎನ್ ಸಿ ಆರ್ ನಮೂದು ಮಾಡಿದ್ದು , ಅದನ್ನು

ನೋಡಿದರೆ ಗುರುತಿಸುತ್ತೇನೆ ನಿಪಿ-10 ಎಂದು ಗುರುತಿಸಲಾಯಿತು. ಸಿ ಡಿ ಪಿ ಓ ರವರು ನನ್ನ ಗಂಡನಿಗೆ ಕೊಟ್ಟಿರುವ ತಿಳುವಳಿಕೆ ನೋಟಿಸ್ ನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ,